**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ದಾಂಡೇಲಿ**

**ಸಿ.ಸಿ ನಂಃ 03/2022**

**ಪಿರ್ಯಾದಿದಾರರುಃ** ಕರ್ನಾಟಕ ಸರ್ಕಾರ,

ವಿರುದ್ಧ

**ಆರೋಪಿತರುಃ** ಯಾಸೀನ ತಂದೆ ಅಬ್ದುಲ್ ಸಾಬ ಹುಂಡೇಕರ
ವಯಾಃ 42 ವರ್ಷ, ಕೆಲಸಃ ಕೂಲಿ
ಸಾಃ ಬಸವೇಶ್ವರ ನಗರ, ದಾಂಡೇಲಿ

**ದೋಷಾರೋಪಣೆ**

ನಾನು ಶ್ರೀಮತಿ.ರೋಹಿಣಿ ಡಿ ಬಸಾಪುರ ಪ್ರ.ದ.ನ್ಯಾ.ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಇಂತಿದೆಃ

ದಾಂಡೇಲಿಯ ಬಸವೇಶ್ವರ ನಗರದ ಪಿರ್ಯಾದಿಯು ವಾಸವಾಗಿದ್ದು ಆರೋಪಿಯಾದ ನೀವು ಪ್ರತಿ ದಿನ ಸರಾಯಿ ಕುಡಿದು ಬಂದು ಮದುವೆ ಆದಾಗಿನಿಂದ ಪಿರ್ಯಾದಿದಾರರಿಗೆ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿದ ಅಪರಾದ ಈ ಮೂಲಕ ನೀವು ಭಾ.ದಂ.ಸಂ.ಕಲಂ 498 ಎ ರನ್ವಯ ಶಿಕ್ಷಾರ್ಹ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ?

2. ಎರಡನೆಯದಾಗಿ, ಆರೋಪಿಯಾದ ನೀವು ದಿನಾಂಕ 16.10.2021 ರಂದು ಸಾಯಂಕಾಲ 6.15 ಗಂಟೆಯಿಂದ 6.30 ಗಂಟೆಯವರೆಗೆ ಪಿರ್ಯಾದಿ ಉದ್ದೇಶಿಸಿ ರಂಡಿ, ಸೂಳೆ ಅಂತಾ ಅವಾಚ್ಯವಾಗಿ ಬೈದ್ದು ಸಾರ್ವಜನಿಕ ಶಾಂತತೆ ಭಂಗಪಡಿಸಿ ಈ ಮೂಲಕ ಭಾ.ದಂ.ಸಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿದ್ದು, ಅದು ನನ್ನ ಸಂಜ್ಞಯಲ್ಲಿದೆ.

3. ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದಿಗೆ ಕೈಯಿಂದ ಕುತ್ತಿಗೆಗೆ, ಮೈಗೆ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿ, ಈ ಮೂಲಕ ಭಾ.ದಂ.ಸಂ.ಕಲಂ 323 ರನ್ವಯ ಶಿಕ್ಷಾರ್ಹ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ?

4. ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದಿಗೆ ಉದ್ದೇಶಿಸಿ ನಿನ್ನ ಸಾವು ನನ್ನ ಕೈಯಾಗ ಇದೆ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಭಯವನ್ನುಂಟು ಮಾಡುವ ಉದ್ದೇಶದಿಂದ ಜೀವದ ಬೆದರಿಕೆ ಹಾಕಿ, ಈ ಮೂಲಕ ಭಾ.ದಂ.ಸಂ.ಕಲಂ 506 ರನ್ವಯ ಶಿಕ್ಷಾರ್ಹ ಅಪರಾದವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ??

ದಿನಾಂಕಃ 23.03.2023

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ದಾಂಡೇಲಿ